ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ ಆವರಣ, ಬೆಂಗಳೂರು–560 056
ದೂರವಾಣಿ: +91–080–22961096

ಸಂಖ್ಯೆ:ಡಿ.ಎಸ್.ಡಬ್ಲ್ಯೂ./ವಿ.ವೇ/ಶು.ಮ/2022–23 ದಿನಾಂಕ: 19.01.2023

## ಸುತ್ತೋಲೆ

ವಿಷಯ: 2022–23ನೇ ಸಾಲಿಗೆ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ(SSP) ಮೆಟ್ರಿಕ್ ನಂತರದ ವಿದ್ಯಾರ್ಥಿವೇತನ ಮಂಜೂರಾತಿಗಾಗಿ ವಿದ್ಯಾರ್ಥಿವೇತನ ಅರ್ಜಿಗಳನ್ನು ರಾಜ್ಯ ವಿದ್ಯರ್ಥಿವೇತನ ತಂತ್ರಾಂಶ (State Scholarship Portal)ದಲ್ಲಿ ನಿಯಮಾನುಸಾರ ಸಲ್ಲಿಸುವ ಕುರಿತು.

ಉಲ್ಲೇಖ:1. ಸಹಾಯಕ ನಿರ್ದೇಶಕರು(ಗ್ರೇಡ್–1), ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ಪತ್ರ ಸಂಖ್ಯೆ:ಸ.ನಿ./ಬೆಂ(ದ)/ಭಾಸವಿವೇ/2022–23, ದಿನಾಂಕ 14.11.2022.

2. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ 17.01.2023.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, 2022–23ನೇ ಸಾಲಿಗೆ ತಮ್ಮ ವಿಭಾಗದಲ್ಲಿ ಪ್ರವೇಶ ಪಡೆದಿರುವ/ಪಡೆಯುತ್ತಿರುವ ಅರ್ಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು(ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷದೊಳಗಿರುವ) ವಿದ್ಯಾರ್ಥಿವೇತನಕ್ಕೆ ಆನ್ ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸಲು ಇ–ಆಡಳಿತ ಇಲಾಖೆಯಿಂದ ಮೆಟ್ರಿಕ್ ನಂತರದ ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶ (State Scholarship Portal for Post Matric) ದಲ್ಲಿ ಅರ್ಜಿಯನ್ನು ಆಹ್ವಾನಿಸಿದ್ದು, ಎಲ್ಲಾ ಅರ್ಹ ವಿದ್ಯಾರ್ಥಿಗಳು ಶುಲ್ಕ ಮರುಭರಣ/ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸುವಂತೆ ಸೂಚಿಸುವುದು ಮತ್ತು ತಮ್ಮ ವಿಭಾಗದ ನಾಮ ಫಲಕದಲ್ಲಿ ಇದನ್ನು ಪ್ರಕಟಿಸುವುದು.

ಒಂದು ವೇಳೆ ಶುಲ್ಕ ವಿನಾಯಿತಿ ಪಡೆದು ಪ್ರವೇಶ ಪಡೆದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಮರುಭರಣ ಶುಲ್ಕ ಮಂಜೂರಾಗದಿದ್ದಲ್ಲಿ ಆಯಾ ವಿಭಾಗದ ಮುಖ್ಯಸ್ಥರು/ವಿದ್ಯಾರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಲು ಈ ಕೆಳಕಂಡ ವೆಬ್ ಸೈಟನ್ನು ಬಳಸುವುದು.**

https://ssp.postmatric.karnataka.gov.in/HSMCA/
(https://ssp.postmatric.karnataka.gov.in)

**ಮೆಟ್ರಿಕ್ ನಂತರ ವಿದ್ಯಾರ್ಥಿವೇತನಕ್ಕೆ ಅರ್ಜಿಸಲ್ಲಿಸಲು ಅಗತ್ಯವಿರುವ ಮಾಹಿತಿಗಳು/ದಾಖಲೆಗಳು ಮತ್ತು ಅರ್ಜಿಯನ್ನು ಸಲ್ಲಿಸುವಾಗ ವಿದ್ಯಾರ್ಥಿಗಳು ಅನುಸರಿಸಬೇಕಾದ ಮಾರ್ಗಸೂಚಿಗಳು:–**

1. 2022–23ನೇ ಸಾಲಿಗೆ ಅರ್ಜಿ ಸಲ್ಲಿಸುವ ಎಲ್ಲಾ ವಿದ್ಯಾರ್ಥಿಗಳು Kutumba ID ಯನ್ನು ಕಡ್ಡಾಯವಾಗಿ ಹೊಂದಿರಬೇಕು, Kutumba ID ಇಲ್ಲದ ವಿದ್ಯಾರ್ಥಿಗಳು Kutumba portal ನಲ್ಲಿ ನೋಂದಾಯಿಸಿಕೊಂಡು ID ಬಂದ ನಂತರ ಅರ್ಜಿಸಲ್ಲಿಸುವುದು.

_2

2. ವಿದ್ಯಾರ್ಥಿಯ ಆಧಾರ್‌ನಲ್ಲಿರುವ ಹೆಸರು ಹಾಗೂ ಕಾಲೇಜಿನಲ್ಲಿ ನೀಡಲಾದ ಹೆಸರು ಬದಲಾವಣೆ ಇದ್ದಲ್ಲಿ ಸದರಿ ವಿದ್ಯಾರ್ಥಿಯು ಈ ಬಗ್ಗೆ ವಿಶ್ವವಿದ್ಯಾಲಯದ UUCMS ನಲ್ಲಿಯೇ ಅರ್ಜಿಸಲ್ಲಿಸಬೇಕು.

3. ಮೊದಲನೇ ಬಾರಿ ಅರ್ಜಿ ಸಲ್ಲಿಸುವ ವಿದ್ಯಾರ್ಥಿಗಳು ರಾಜ್ಯ ವಿದ್ಯಾರ್ಥಿವೇತನ ತಂತ್ರಾಂಶದಲ್ಲಿ ತಮ್ಮ ವಿದ್ಯಾರ್ಥಿವೇತನ ಖಾತೆಯನ್ನು **ಸೃಜನೆ ಮಾಡಿಕೊಂಡು**(Registration) ನಂತರ ವಿದ್ಯಾರ್ಥಿಲಾಗಿನ್‌ನಲ್ಲಿ ಅರ್ಜಿಯನ್ನು ಸಲ್ಲಿಸುವುದು. ಈಗಾಗಲೇ ಹಿಂದಿನ ತರಗತಿಗಳಲ್ಲಿ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹ ವಿದ್ಯಾರ್ಥಿಗಳು **ನೇರವಾಗಿ ವಿದ್ಯಾರ್ಥಿ ಲಾಗಿನ್‌ನಲ್ಲಿ** ಅರ್ಜಿಯನ್ನು ಸಲ್ಲಿಸುವುದು.

4. ವಿದ್ಯಾರ್ಥಿಯ ಹೆಸರಿನಲ್ಲಿರುವ ಕಂದಾಯ ಇಲಾಖೆಯಿಂದ ವಿತರಿಸಿರುವ ಅರ್.ಡಿ ಸಂಖ್ಯೆ ಇರುವ ಜಾತಿ ಪ್ರಮಾಣ ಪತ್ರ.

5. ಕಂದಾಯ ಇಲಾಖೆಯಿಂದ ವಿತರಿಸಿರುವ ಅರ್.ಡಿ ಸಂಖ್ಯೆ ಇರುವ ಆಧಾಯ ಪ್ರಮಾಣ ಪತ್ರ.

6. ವಿದ್ಯಾರ್ಥಿ ಮತ್ತು ಪೋಷಕರ ಆಧಾರ್ ಸಂಖ್ಯೆ.

7. ವಿಶ್ವವಿದ್ಯಾಲಯದ Registration Number

8. ಹಿಂದಿನ ವರ್ಷದ ಅಂಕಪಟ್ಟಿಗಳು / ಪಾಸ್ ಪ್ರಮಾಣ ಪತ್ರ

9. ಶುಲ್ಕ ಪಾವತಿ ರಶೀಧಿ

10. ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳು **ಹಾಸ್ಟಲ್‌ಸ್ಕಾಲರ್** ವಿದ್ಯಾರ್ಥಿವೇತನ ಪಡೆಯಲು ಸಂಬಂಧಪಟ್ಟ ಹಾಸ್ಟೆಲ್ ವಾರ್ಡನ್ ವತಿಯಿಂದ SSP-HMIS (Hostel Management Information System) ಪೋರ್ಟಲ್‌ನಲ್ಲಿ Registration ಮಾಡಿಸುವುದು ಕಡ್ಡಾಯವಾಗಿರುತ್ತದೆ.

11. ವಿದ್ಯಾರ್ಥಿವೇತನಕ್ಕೆ ಆನ್-ಲೈನ್ ಮುಖಾಂತರ ಅರ್ಜಿಯನ್ನು ಸಲ್ಲಿಸುವ ಮೊದಲು ವಿದ್ಯಾರ್ಥಿಗಳು ತಾವು ಹೊಂದಿರುವ ಬ್ಯಾಂಕ್ ಖಾತೆಗೆ ಕಡ್ಡಾಯವಾಗಿ ಆಧಾರ್ ಸೀಡ್ (Seeding/Link Aadhar to Bank Account) ಮತ್ತು NPCI (National Payment Corporation of India) ನಲ್ಲಿ ಕಡ್ಡಾಯವಾಗಿ ಜೋಡಣೆ ಮಾಡಿಸುವುದು ಅಥವಾ ಅಂಚೆ ಕಛೇರಿಯಲ್ಲಿ IPPB Account ತೆರೆಯುವುದು.

12. ಬೆಂಗಳೂರು ವಿಶವಿದ್ಯಾಲಯದ ವಿವಿಧ ವಿಭಾಗಗಳಲ್ಲಿ Payment Quota ದಡಿಯಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳು ಸರ್ಕಾರಿ ಕೋಟದಡಿ ಪ್ರವೇಶ ಪಡೆದ ವಿದ್ಯಾರ್ಥಿಗಳೆಂದು ನಮೂದಿಸತಕ್ಕದ್ದು. Payment/Management Quota ಎಂದು ನಮೂದಾದರೆ ವಿದ್ಯಾರ್ಥಿವೇತನ ಮಂಜೂರಾಗುವುದಿಲ್ಲ.

13. ವಿದ್ಯಾರ್ಥಿಗಳು ಅರ್ಜಿ ಸಲ್ಲಿಸುವ ಬಗ್ಗೆ ಹೆಚ್ಚಿನ ಮಾಹಿತಿಯನ್ನು (https://ssp.postmatic.karnataka.gov.in) ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ಸಹಾಯಕ ನಿರ್ದೇಶಕರ ಕಛೇರಿ(ಗ್ರೇಡ್-1), ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ದಕ್ಷಿಣ ತಾಲ್ಲೂಕು, ಬನಶಂಕರಿ, ದೂರವಾಣಿ ಸಂಖ್ಯೆ:080-26711096 ನ್ನು ಸಂಪರ್ಕಿಸುವುದು.

ತಮ್ಮ ವಿಶ್ವಾಸಿ,

**ಕುಲಸಚಿವರು** 19/1/23

**ಗೆ,**

ಸ್ನಾತಕೋತ್ತರ ವಿಭಾಗದ ನಿರ್ದೇಶಕರು/ಪ್ರಾಂಶುಪಾಲರು/ಮುಖ್ಯಸ್ಥರು/ಸಂಯೋಜಕರು
ಜ್ಞಾನಭಾರತಿ/ಸಿಟಿ. ಕ್ಯಾಂಪಸ್ ಆವರಣ/ ಪಿ.ಜಿ.ಸೆಂಟರ್ ರಾಮನಗರ,
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು 560056.

**ಪ್ರತಿ:**1. ಎಲ್ಲಾ ಪ್ರಧಾನ ಕ್ಷೇಮಪಾಲಕರುಗಳು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.
2. ಆಪ್ತಕಾರ್ಯದರ್ಶಿಗಳು, ಕುಲಪತಿಗಳು/ ಕುಲಸಚಿವರು /ಕುಲಸಚಿವರು(ಮೌಲ್ಯಮಾಪನ), ಬೆಂ.ವಿ.ಬೆಂ.
3. ವಿತ್ತಾಧಿಕಾರಿಗಳ ಆಪ್ತ ಕಾರ್ಯಾಲಯ, ಬೆಂ.ವಿ.ಬೆಂ.
4. ಲೆಕ್ಕಪರಿಶೋಧಕರು, ಬೆಂ.ವಿ.ಬೆಂ.